ವಾರದ ಪತ್ರ

## ‘ರಾಮಾಚಾರಿ’ ಆತ್ಮ ಕಳೆದುಕೊಂಡನೆ?

ಕಲರ್ಸ್ ಕನ್ನಡ ವಾಹಿನಿಯ ‘ರಾಮಾಚಾರಿ’ ಮುಕ್ತಾಯದ ಹಂತಕ್ಕೆ ತಲುಪಿದ್ದು, ಈಗಾಗಲೇ ಮುಗಿಯಬೇಕಿತ್ತು. ಆದರೂ ಅಸಂಬದ್ಧಗಳನ್ನು ಸೇರಿಸಿ ಗೊಂದಲದಲ್ಲೇ ಕಂತನ್ನು ಹೆಣೆಯುತ್ತಿದ್ದಾರೆ. ದ್ವಿಪಾತ್ರದ ಕಲ್ಪನೆ, ಹಿರಿಯ ಸೊಸೆ ವೈಶಾಖಾ ತನ್ನ ಓರಗಿತ್ತಿ, ಅಂದರೆ ಎರಡನೇ ಸೊಸೆ ಚಾರುಲತಾಗೆ ಅತ್ತೆಯಿಂದ ಹೊಡೆಸುವುದು, ಮೂರನೇ ಸೊಸೆ ರುಕ್ಮಿಣಿ ಏನೋ ಮಾತನಾಡಿ ಕಥೆಯನ್ನು ಎಳೆಯುವ ಪ್ರಯತ್ನ ಬಾಲಿಶ ಅನ್ನಿಸುತ್ತಿದೆ.

‘ರಾಮಾಚಾರಿ’ ನೋಡುವಾಗ ತ.ರಾ. ಸುಬ್ಬರಾವ್ ಅವರ ‘ನಾಗರಹಾವು’ ಕಾದಂಬರಿಯ ರಾಮಾಚಾರಿ, ಅದನ್ನೇ ಆಧರಿಸಿ ಪುಟ್ಟಣ್ಣ ಕಣಗಾಲ್ ಅವರು ರೂಪಿಸಿದ ‘ನಾಗರಹಾವು’ ಸಿನಿಮಾದಲ್ಲಿ ವಿಷ್ಣುವರ್ಧನ್ ಅವರ ರಾಮಾಚಾರಿ ಪಾತ್ರದ ಚಂದದ ಅಭಿನಯ, ಯಶ್ ಅಭಿನಯದ ‘ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ’, ರವಿಚಂದ್ರನ್ ಅಭಿನಯದ ‘ರಾಮಾಚಾರಿ’ ಸಿನಿಮಾದ ದೃಶ್ಯಗಳು ಮರುಕಳಿಸುತ್ತವೆ. ಅದೇ ಕಾರಣಕ್ಕೆ ಈ ಧಾರಾವಾಹಿಯನ್ನು ನೋಡಲು ಇಷ್ಟ ಆಗುತ್ತಿತ್ತು. ಆರಂಭದಲ್ಲಿ ಇದು ಕೂಡ ಅಷ್ಟೇ ಚೆನ್ನಾಗಿತ್ತು. ಈಗ ಮುಂದುವರಿಸಲು ಅವಕಾಶ ಇಲ್ಲದಂತಾಗಿದೆ. ಅಷ್ಟಕ್ಕೂ ಮುಂದುವರಿಸುವುದು ಅರ್ಥಹೀನ ಎಂದೆನಿಸುತ್ತದೆ.

—ವಾಸುದೇವ, ಹಾಸನ

## ಸರಿಗಮ ನಡುವೆ ಅಪಹಾಸ್ಯದ ಅಪಸ್ವರ

ಝೀ ಕನ್ನಡದ ಜನಪ್ರಿಯ ಕಾರ್ಯಕ್ರಮ ‘ಸರಿಗಮಪ’ದ ಮಹಾಸಂಚಿಕೆ ವಿಶೇಷವಾಗಿತ್ತು. ಬಾಗಲಕೋಟೆಯಲ್ಲಿ ಜರುಗಿದ ಈ ಕಾರ್ಯಕ್ರಮಕ್ಕೆ ಜನಸಾಗರವೇ ಸೇರಿತ್ತು. ಗಾಯಕರು ತಮ್ಮ ಸುಶ್ರಾವ್ಯ ಕಂಠದಿಂದ ಸಭಿಕರನ್ನು ರಂಜಿಸಿದರು. ಕಾರ್ಯಕ್ರಮದ ಕೆಲವು ವಿಶೇಷಗಳು ನಮ್ಮನ್ನು ಬೆರಗಾಗಿಸಿದವು. ದ್ಯಾಮೇಶ ಅವರ ಹಾಡಿಗೆ ಪ್ರೇಕ್ಷಕರ ಕಣ್ಣಿನಲ್ಲಿ ಕರುಣೆಯ ಮಳೆಗರೆದಂತೆ ಭಾಸವಾಯಿತು. ಕೆಲ ತಾಯಂದಿರು ತಂದ ಬುತ್ತಿಯಲ್ಲಿ ಅವರಿಗೆ ಕೈ ತುತ್ತು ನೀಡಿ ಮಮತೆಯನ್ನು ತೋರಿಸಿದರು.

ಉತ್ತರ ಕರ್ನಾಟಕದ ಪ್ರತಿಭೆ ಬಾಲು ಬೆಳಗುಂದಿ ಅವರ ಹಾಡಿಗೆ ಜನಸ್ತೋಮ ಕುಣಿದಾಡಿ ಪ್ರೋತ್ಸಾಹಿಸಿತು. ಅವರ ಹೆಂಡತಿಗೆ ಸೀಮಂತ ಶಾಸ್ತ್ರ ಮಾಡಿದ್ದು ಬಾಂಧವ್ಯವನ್ನು ಬೆಸೆಯುಂತೆ ಮಾಡಿತು. ತೀರ್ಪುಗಾರರಾದ ವಿಜಯ್ ಪ್ರಕಾಶ್, ರಾಜೇಶ್ ಕೃಷ್ಣನ್, ಅರ್ಜುನ್ ಜನ್ಯ ಅವರೂ ಹಾಡಿ ಪ್ರೇಕ್ಷಕರನ್ನು ರಂಜಿಸಿದ ಸುಂದರ ಕ್ಷಣ ಸ್ಮರಣೀಯ. ಇಂತಹ ಅದ್ಭುತದಲ್ಲಿ ಆಗಮ ಶಾಸ್ತ್ರಿ ಅವರ ಗಾಯನದ ಸಂದರ್ಭದಲ್ಲಿ ಕೇಶತೈಲವನ್ನು ಉದ್ದೇಶಿಸಿ ಮಾತಾಡಿದ ರೀತಿ ಮತ್ತು ಆಗ ಮಂಡೆ ಬೋಳಾದವರಿಗೆ ಮಾಡಿದ ಅಪಹಾಸ್ಯ ಒಟ್ಟಾರೆ ಕಾರ್ಯಕ್ರಮಕ್ಕೆ ಕಪ್ಪುಚುಕ್ಕೆಯಂತೆ ಗೋಚರಿಸಿತು.

—ಭಾರತೀ ಗಂಗಾಧರ್, ಬೆಂಗಳೂರು




## ದ್ವಂದ್ವಾರ್ಥವೇ ‘ಮಜಾ’ ಅಲ್ಲ

ಸೃಜನ್ ಲೋಕೇಶ್ ಅವರ ‘ಮಜಾ ಟಾಕೀಸ್’ ಕಲರ್ಸ್ ಕನ್ನಡ ವಾಹಿನಿಯಲ್ಲಿ ಮರು ರೂಪ ಪಡೆದಿದೆ. ಆದರೆ, ಶೋ ವಿಪರೀತ ದ್ವಂದ್ವಾರ್ಥದ ಸಂಭಾಷಣೆ ಮತ್ತು ಕಲಾವಿದರ ಹಾವಭಾವದಿಂದ ಬಹಳ ಮುಜುಗರವನ್ನು ಉಂಟು ಮಾಡುತ್ತಿದೆ ಅನ್ನಿಸಿದೆ. ಈ ಬಾರಿ ಯೋಗರಾಜ್ ಭಟ್ಟರ ಪ್ರವೇಶವೂ ಆಗಿದೆ. ಹಾಗಾಗಿ ಪ್ರತಿ ಸಂಚಿಕೆಯಲ್ಲೂ ಹೆಚ್ಚಿನ ನಿರೀಕ್ಷೆ ಇದೆ. ಅವರಿದ್ದ ಮೇಲೆ ಏನಾದರೂ ವಿಶೇಷ ಇದ್ದೇ ಇರುತ್ತದೆ ಎನ್ನುವ ನಂಬಿಕೆ ನಮ್ಮದು. ತಂಡದಲ್ಲಿ ಕುರಿ ಪ್ರತಾಪ್, ಪ್ರಿಯಾಂಕಾ, ವಿನೋದ್ ಹಾಸ್ಯ ಕಲಾವಿದರ ಸಂಗಮವಾಗಿದೆ. ಆದರೆ ಎಲ್ಲೆ ಮೀರಿದ ಡಬಲ್ ಮೀನಿಂಗ್ ಕಿರಿಕಿರಿಯನ್ನು ಉಂಟುಮಾಡುತ್ತಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಬಡತನವ ಆಡಿಕೊಳ್ಳಲು ಬ್ಯಾಡಿ...

ಕಲರ್ಸ್ ಕನ್ನಡ ವಾಹಿನಿಯ ‘ಯಜಮಾನ’ ಧಾರಾವಾಹಿಯ ನಾಯಕ ರಾಘುವಿನ ಮಲತಾಯಿ ಮತ್ತು ‘ನೂರು ಜನ್ಮಕೂ’ ಧಾರಾವಾಹಿಯ ನಾಯಕಿಯ ಮನೆಯವರನ್ನು ಅವರ ಬೀಗರು ನಿಂದಿಸುತ್ತಲೇ ಇರುತ್ತಾರೆ. ಇದಲ್ಲದೆ ‘ದೃಷ್ಟಿಬೊಟ್ಟು’ವಿನ ದೃಷ್ಟಿಯ ಮನೆಯವರನ್ನು ಹೀನಾಯವಾಗಿ ಹೀಯಾಳಿಸುವುದನ್ನು ನೋಡಿದರೆ ಬಡತನವನ್ನು ಆಡಿಕೊಂಡಂತೆ ಕಾಣಿಸುತ್ತದೆ. ಇಲ್ಲಿ ಶ್ರೀಮಂತರೆಲ್ಲ ನೀತಿವಂತರು, ಬಡವರು ಮಾತ್ರ ಅಪಶಕುನದ ಪ್ರಾಣಿಗಳಂತೆ ಬಿಂಬಿಸುವುದು ತೀರಾ ಅಸಹ್ಯ.

—ಎಸ್. ಶರ್ಮಿಷ್ಠಾ, ಬೆಂಗಳೂರು

## ಕುತೂಹಲಕರ ಖಳ ನಾಯಕಿಯರು

ಸಾಧಾರಣವಾಗಿ ಧಾರಾವಾಹಿಗಳು ಪ್ರಾರಂಭ ಆದಾಗ ನಾಯಕಿ–ನಾಯಕ ಯಾರು ಎನ್ನುವ ಕುತೂಹಲ ಇರುತ್ತದೆ. ಆದರೆ, ಈಗ ಖಳನಾಯಕಿಯರು ಯಾರು? ಮುಂದೆ ಆತ್ಮ ಪ್ರೇತಾತ್ಮಗಳ ಕಾಡಾಟ–ಕಾದಾಟ ಶುರುವಾಗಬಹುದೇ ಎನ್ನುವ ಶಂಕೆಯ ಕುತೂಹಲ ಕೆರಳುವಂತೆ ಆಗಿದೆ. ಕಲರ್ಸ್ ಕನ್ನಡದ ‘ನೂರು ಜನ್ಮಕೂ’ ಧಾರಾವಾಹಿಯ ಖಳನಾಯಕಿ ಇದ್ದಕ್ಕಿದ್ದಂತೆ ಮಾಯವಾಗುತ್ತಿದ್ದಾಳೆ.

ಆಗಾಗ ಕಾಣಿಸಿಕೊಳ್ಳುವ ಅವಳು ವಿಚಿತ್ರವಾಗಿ ನಡೆದುಕೊಳ್ಳುವುದು ನಿಗೂಢವಾಗಿಯೇ ಉಳಿಯುತ್ತದೆ.

—ಎಸ್. ವೇದಗರ್ಭ ಬೆಂಗಳೂರು

## ಕೇಡಿಗೆ ಮಿತಿ ಇರಲಿ

ಝೀ ಕನ್ನಡ ವಾಹಿನಿಯ ‘ಲಕ್ಷ್ಮೀ ನಿವಾಸ’ ಧಾರಾವಾಹಿ ಆರಂಭದಲ್ಲಿ ಚೆನ್ನಾಗಿ ಮೂಡಿಬರುತ್ತಿತ್ತು. ಕಥೆಯ ಹಂದರ ಮತ್ತು ನಿರೂಪಣೆಯ ಶೈಲಿ ಮಧ್ಯಮ ವರ್ಗದ ಜನರಿಗೆ ಅಚ್ಚುಮೆಚ್ಚು ಅನಿಸುತ್ತಿತ್ತು. ಅದು ಸಾಗುತ್ತಿರುವ ಭಯಾನಕ ಹಾದಿಯನ್ನು ನೋಡಿದರೆ, ಸ್ವತಃ ನಿರ್ದೇಶಕರೇ ಏನೋ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಎನ್ನುವ ಅನುಮಾನ ಉಂಟಾಗುತ್ತಿದೆ. ಜಯಂತ್ ಪಾತ್ರವನ್ನು ಬೇಕಾಬಿಟ್ಟಿಯಾಗಿ ಸೈಕೋ ರೀತಿ ಬಿಂಬಿಸಲಾಗಿದೆ. ಇಂಥ ಪಾತ್ರಗಳು ಜನಸಾಮಾನ್ಯರ ಮೇಲೆ ಎಂಥ ಪರಿಣಾಮ ಬೀರುತ್ತವೆ ಎಂಬುದರ ಬಗ್ಗೆ ನಿರ್ದೇಶಕರಿಗೆ ಅರಿವು ಇದ್ದಂತಿಲ್ಲ. ಕೇಡಿಗೆ ಮಿತಿ ಇರಲೇಬೇಕು. ಮನೆಯಲ್ಲಿ ಕುಳಿತು ನೋಡುವವರಿಗೆ ಆಪ್ತ ಎನ್ನಿಸುವಂತೆ ಒಂದು ಕಥೆಯನ್ನು ರೂಪಿಸಬೇಕು ಎನ್ನುವುದು ನಮ್ಮ ನಿರೀಕ್ಷೆ.

—ಸ್ವರೂಪ್, ಬೆಂಗಳೂರು

## ಬದಲಾವಣೆಯಿಂದ ಅನುಕೂಲ

ಝೀ ಕನ್ನಡ ವಾಹಿನಿಯ ‘ಸೀತಾರಾಮ’ ಧಾರಾವಾಹಿಯ ಸಮಯವನ್ನು ಈಗ ಸಂಜೆ 5.30ಕ್ಕೆ ಬದಲಿಸಿರುವುದಕ್ಕೆ ಧನ್ಯವಾದಗಳು. ಇದರಿಂದ ನಮಗೆ ಚಂದನದ ‘ಥಟ್ ಅಂತ ಹೇಳಿ’ ಕಾರ್ಯಕ್ರಮವನ್ನು ನೋಡಲು ಅನುಕೂಲವಾಯಿತು. ಮುಂಚೆ ಆ ಸಮಯದಲ್ಲಿ ಮನೆಯ ಹೆಂಗಸರೆಲ್ಲ ಸೀತಾರಾಮ ನೋಡುತ್ತಾ ಕೂತು ನಮಗೆ ‘ಥಟ್ ಅಂತ ಹೇಳಿ’ ಕಾರ್ಯಕ್ರಮವನ್ನು ನೋಡಲು ತೊಂದರೆ ಆಗುತ್ತಿತ್ತು.

—ಅರುಣ್ ಕೆ.ಎಸ್